ಮೈಸೂರ ಗೆಜೆಟ್ಟ.

ನಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 7.

ಬೆಂಗಳೂರು, ಗುರುವಾರ, ಫೆಬ್ರವರಿ ತಾ॥ 18, ಸ॥ 1904.

IIನ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜುಡ್ಜೀರ್ ವಗೈರೆಯವರಿಂದ ಕೊಡೋಣಾವ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

ನಂಬರು 2, ತಾರೀಖು 12ನೆ ಫೆಬ್ರವರಿ ಸ॥ 1904ನೆ ಇಸವಿ.

ಇನಾಂದಾರ್ರಿಗೆ ಇದರಿಂದ ತಿಳಿಸುವಪಡಿಸುವದೇನಂದರೆ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರತಕ್ಕ ಜಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್ ಡೀಡ್ ಯಾನೆ ಖಾಯಂ ಪಟ್ಟೆಗಳು (100) ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರು ಏರ್ಪಾ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರ್ರು ಆಂಥಾ ನೋಟೀಸುಗಳನ್ನು ವೇರ್ ಮಾಡದೆ ಕೊಡತಕ್ಕದ್ದೆಂದು ನೇಮಿಸಲ್ಪಟ್ಟು ಇರುತ್ತಾರೆ.

3. ಸದರಿ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ಯಾಂಟ್,

ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್, ಮೈಸೂರು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 28ನೆಯ ಪ್ರಕಟನ ಪತ್ರಿಕೆ, ಸ॥ 1904ನೆಯ ಇಸವಿ ಜನವರಿ ತಾರೀಖು 9.

ಮೈಸೂರು ದೇಶೀಯ ಪರೀಕ್ಷಾ ಭಾಷಾ ಗ್ರಂಥಗಳು.

ಇದರಲ್ಲೀ ಕಂಡ ಭಾಷಾ ಗ್ರಂಥಗಳು ಸ॥ 1905ನೆಯ ಇಸವಿ ನವೆಂಬರ್ ತಿಂಗಳಲ್ಲಿ ನಡೆವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ...ನಿಯಮಿಸಲ್ಪಟ್ಟಿರುವ ಭಾಗ. (ಇಲಾಖೆಯವರಿಂದ ಮುದ್ರಿಸಲ್ಪಡುವುದು.)

ಪದ್ಯ...ಹೊಸ ಪದ್ಯಸಾರ, Iನೆಯ ಭಾಗ, ಪದ್ಯಗಳು 196—342.